ಮೆಣಸಿನಕಾಯಿ ಮಾರುಕಟ್ಟೆಗೆ ಭೇಟಿ

ಪ್ರಜಾವಾಣಿ 22/4/2016

# 'ಎಪಿಎಂಸಿಗಳಲ್ಲಿ ಮಾರಾಟ ಮಾಡಿ'

ಬ್ಯಾಡಗಿ: ರಾಜ್ಯದ ಕೃಷಿ ಮಾರುಕಟ್ಟೆಗಳಲ್ಲಿ ಶೇ 42ರಷ್ಟು ಮಾತ್ರ ರೈತರ ಉತ್ಪನ್ನಗಳು ಮಾರಾಟವಾಗುತ್ತಿದ್ದು, ಇದರಿಂದ ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಗುವುದರ ಜೊತೆಗೆ ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡಲು ಕಷ್ಟವಾಗಲಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಹೇಳಿದರು.

ಇಲ್ಲಿಯ ಅಂತರರಾಷ್ಟ್ರೀಯ ಮೆಣಸಿನಕಾಯಿ ಮಾರುಕಟ್ಟೆಗೆ ಗುರುವಾರ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ರೈತರ ಹೆಸರಿನಲ್ಲಿ ಹಲವಾರು ವರ್ತಕರು ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಲ್ಲದೆ, ಅವುಗಳನ್ನು ಗೋದಾಮು ಮತ್ತು ಶೀತಲಗೃಹ (ಕೋಲ್ಡ್ ಸ್ಟೋರೇಜ್)ಗಳಲ್ಲಿ ಸಂಗ್ರಹಿಸಿಡುತ್ತಾರೆ. ಹೀಗಾಗಿ ಲಾಭ ರೈತರಿಗೆ ತಲುಪುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ಇದುವರೆಗೆ ರಾಜ್ಯದ 62ಕ್ಕೂ ಹೆಚ್ಚು ಎಪಿಎಂಸಿಗಳಿಗೆ ಭೇಟಿ ನೀಡಿದ್ದು, ಎಲ್ಲಾ ಕಡೆಗಳಲ್ಲಿ ಇದೇ ರೀತಿಯ ವಾತಾವರಣ ಕಂಡು ಬಂದಿದೆ, ಕೃಷಿ ಉತ್ಪನ್ನ ಸಮಿತಿಗಳಲ್ಲಿ ರೈತರು ಮಾರಾಟಕ್ಕೆ ತಂದ ಕೃಷಿ ಉತ್ಪನ್ನಗಳ ದಾಖಲೆಗಳು ಲಭ್ಯವಿಲ್ಲ. ಕೇವಲ ರೈತರ ಹೆಸರು ಬರೆಸಿಕೊಂಡು ವ್ಯವಹಾರ ಮಾಡುವ ಪದ್ಧತಿ ಮುಂದುವರೆದಿರುವುದರಿಂದ ರಾಜ್ಯ ಹಾಗೂ ಹೊರರಾಜ್ಯದ ರೈತರ ವಿವರ ಹಾಗೂ ಅವರು ತಂದ ಮೆಣಸಿನಕಾಯಿಯ ಪ್ರಮಾಣ ಲಭ್ಯವಾಗುತ್ತಿಲ್ಲ. ಕಾರಣ ಮುಂದಿನ ದಿನಗಳಲ್ಲಿ ರೈತರ



ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಗುರುವಾರ ಭೇಟಿ ನೀಡಿ ರೈತರೊಂದಿಗೆ ಅಗತ್ಯ ಮಾಹಿತಿ ಸಂಗ್ರಹಿಸಿದರು. ಎಪಿಎಂಸಿ ಅಧ್ಯಕ್ಷ ಎಸ್.ಸಿ.ಶಿಡೇನೂರ ಉಪಸ್ಥಿತರಿದ್ದರು

**ಕೃಷಿ ಉತ್ಪನ್ನ ಸಮಿತಿಗಳಲ್ಲಿ ರೈತರು ಮಾರಾಟಕ್ಕೆ ತಂದ ಕೃಷಿ ಉತ್ಪನ್ನಗಳ ದಾಖಲೆಗಳು ಲಭ್ಯವಿಲ್ಲ. ಕೇವಲ ರೈತರ ಹೆಸರು ಬರೆಸಿಕೊಂಡು ವ್ಯವಹಾರ ಮಾಡುವ ಪದ್ಧತಿ ಮುಂದುವರೆದಿದೆ**

**ಡಾ.ಪ್ರಕಾಶ ಕಮ್ಮರಡಿ**
ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ

ದಾಖಲೆಗಳನ್ನು ಪಡೆಯುವುದು ಅಗತ್ಯವಾಗಿದೆ ಎಂದು ಕಾರ್ಯದರ್ಶಿಗಳಿಗೆ ಸಲಹೆ ನೀಡಿದರು.

ಪ್ರಸಕ್ತ ಬರಗಾಲದಲ್ಲಿಯೂ ಹೆಚ್ಚಿನ ಪ್ರಮಾಣದ ಮೆಣಸಿನಕಾಯಿ ಆವಕವಾಗಿರುವುದು ಉತ್ತಮ ಬೆಳವಣಿಗೆಯಾಗಿದೆ. ಆದರೆ, ಮೆಣಸಿನಕಾಯಿ ಹೆಚ್ಚಿನ ಪ್ರಮಾಣದಲ್ಲಿ ಬಂದಾಗಲೂ ಬೆಲೆಯಲ್ಲಿ ಇಳಿಕೆ ಕಂಡು ಬಂದರೆ ಆಗ ಆಯೋಗ ಬೆಂಬಲ ಬೆಲೆಯ ಮೂಲಕ ರೈತರ ಪರವಾಗಿ ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದರು.

ಹಲವಾರು ಅಂಗಡಿಗಳಿಗೆ ಭೇಟಿ ನೀಡಿ ಅಗತ್ಯ ಮಾಹಿತಿ ಸಂಗ್ರಹಿಸಿದರು. ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕಿ ಟಿ.ಎಸ್.ವಿಜಯಲಕ್ಷ್ಮಿ, ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಮಲ್ಲಾಡದ, ಎಪಿಎಂಸಿ ಅಧ್ಯಕ್ಷ ಎಸ್.ಸಿ.ಶಿಡೇನೂರ, ಕಾರ್ಯದರ್ಶಿ ಟಿ.ಎ.ಸತೀಶ, ಸಹಾಯಕ ಕಾರ್ಯದರ್ಶಿ ಗೌಡರ ಹಾಗೂ ಪ್ರಭು ದೊಡ್ಮನಿ ಉಪಸ್ಥಿತರಿದ್ದರು.

DECCAN HERALD - 22/4/2016

# 'No records of chilli inflow in APMC'

## 'This is affecting farmers in terms of support price'

**BYADAGI (HAVERI DIST), DHNS: Karnataka Agriculture Price Commission Chairman T N Prakash Kammaradi said that only 42 per cent of agriculture produce are being sold through the APMCs in the State. As a result, the income of the government is coming down and it becomes difficult to provide support price to farm produce.**

Speaking to press persons during his visit to the international chilli market in Byadagi in Haveri district on Thursday, Dr Kammaradi said that often many traders sell the agriculture produce in the name of farmers. The traders also store the produce in godowns and cold storage units. In this way, the farmers stay away from the market and fail to get profits.



**Karnataka Agriculture Price Commission Chairman Dr T N Prakash Kammaradi inspecting the international chilli market in Byadagi in Haveri district on Thursday. APMC President S C Shidenur is also present.** DH PHOTO

He said, "I have visited more than 60 APMCs in the state till now. The situation is same almost everywhere. In APMCs, there are no records of the produce brought by farmers for sale. The system of just noting down the name before trading is being continued even today. Therefore, there is no clear information about the quantity of chilli brought by farmers of the State and outside State farmers in Byadagi market. Therefore in days to come, it is necessary to keep record of the inflow and outflow of chilli in Byadagi market and also more information about the farmers coming here". He discussed the issue with the secretary and gave necessary suggestions.

He said that it was a progressive development to see inflow of large quantity of chilli in Byadagi market even during drought. But if there is fall in price even when sufficient inflow of chilli is witnessed, the Commission will have to work in support of the farmers by giving support price.

Dr Kammaradi later visited various shops in the APMC premises and collected necessary information. Horticulture Department Senior Assistant Director T S Vijaylakshmi, Assistant Agriculture Director Shivakumar Malladad, APMC President S C Shidenur, Secretary T A Satish, Assistant Secretary Gowdar and Prabhu Dodmani were present.